ಸರ್ಕಾರವು ಅಧಿಕಾರ ವಹಿಸಿಕೊಂಡ ದಿನದಿಂದಲೂ ಅವರ ಮಂತ್ರಿಮಂಡಲದ ಸಚಿವರೂ ಒಳಗೊಂಡಂತೆ ಸ್ವಜನ ಪಕ್ಷಪಾತ, ಭೂ ಹಗರಣದ ವಿಷಯಗಳಿವೆ. ಅಲ್ಲದೇ, ಸದರಿ ವಿಷಯವನ್ನು ಲೋಕಾಯುಕ್ತಕ್ಕೆ ವಹಿಸಲಾಗಿದೆ ಎಂದು ತಿಳಿಸಲಾಗಿದೆ. ಈ ದಿಸೆಯಲ್ಲಿ ಒಂದಕ್ಕಿಂತಲೂ ಹೆಚ್ಚು ವಿಷಯಗಳಿಗೆ. ಅಲ್ಲದೇ, ವಿಷಯವು ಲೋಕಾಯುಕ್ತದ ಮುಂದೆ ಇದೆ ಎಂದು ತಿಳಿಸಲಾಗಿದೆ. ಹಿಂದಿನ ಸಭಾಧ್ಯಕ್ಷರ ತೀರ್ಮಾನವನ್ನು ಗಮನಿಸಲಾಗಿ, ಭ್ರಷ್ಟಾಚಾರದಂಥ ವಿಷಯಗಳು ನಿಲುವಳಿ ಸೂಚನೆ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಯ ವಿಷಯವನ್ನು ನಿಯಮ 60ರಡಿಯಲ್ಲಿ ಪ್ರಸ್ತಾಪಿಸಲು ಅನುಮತಿಯನ್ನು ನಿರಾಕರಿಸಲಾಗಿದೆ. ವಿಷಯವನ್ನು ಬೇರೆ ಸಂದರ್ಭಗಳಲ್ಲಿ ಚರ್ಚೆ ಮಾಡಬಹುದು.

**(ಗೊಂದಲ)**

ಈಗ ತಾವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ನಾನು ಎಲ್ಲ ಸದಸ್ಯರನ್ನು ವಿನಂತಿ ಮಾಡುತ್ತೇನೆ, ದಯವಿಟ್ಟು ಎಲ್ಲರೂ ತಮ್ಮತಮ್ಮ ಸ್ಥಾನಗಳಿಗೆ ಹೋಗಿ, ಪ್ರಶ್ನೋತ್ತರಕ್ಕೆ ಅವಕಾಶವನ್ನು ಮಾಡಿಕೊಡಿ.

**(ಗೊಂದಲ)**

ದಯವಿಟ್ಟು ಕುಳಿತುಕೊಳ್ಳಿ, ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಮಯದಲ್ಲಿ ಮಾತನಾಡಲು ಸಾಕಷ್ಟು ಅವಕಾಶವಿದೆ.

**(ಗೊಂದಲ)**

(ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು).

**3. ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯ**

**ವಿಷಯ: ಮಾನ್ಯ ಸಭಾಧ್ಯಕ್ಷರು ತೀರ್ಪನ್ನು ಮರು ಪರಿಶೀಲಿಸಲು ಒತ್ತಾಯ**

**ಶ್ರೀ ಡಿ.ಕೆ. ಶಿವಕುಮಾರ್:** ಇಲ್ಲಿ ಮಾತನಾಡಿದರೆ ಸದಸ್ಯರ ಮೇಲೆ ಎನ್‌ಕ್ವೈರಿ ಮಾಡಲು ಹೋಗುತ್ತೀರಿ? ನಾವು ಮಾತನಾಡುವ ಹಾಗೂ ಇಲ್ಲ. ನಮ್ಮನ್ನು (ವೆಲ್‌ಗೆ) ಕಳುಹಿಸಿ ಬಿಟ್ಟು ನೀವು ಜಡ್ಜ್‌ಮೆಂಟ್ ಓದಿದರೆ ಸರಿ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್. ಸುರೇಶ್‌ಕುಮಾರ್:** ಈ ರೀತಿ ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಬರುತ್ತದೆಯೇ?

(ಗೊಂದಲ)

**ಅಧ್ಯಕ್ಷರು:** ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ದಯವಿಟ್ಟು ಇದು ಯಾವುದೂ ಕೂಡ ಕಡತಕ್ಕೆ ಹೋಗುವ ಹಾಗಿಲ್ಲ.

(ಗೊಂದಲ)

**ಅಧ್ಯಕ್ಷರು:** ಯವುದೂ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

**ಅಧ್ಯಕ್ಷರು:** ಇದು ಸರಿಯಲ್ಲ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಅಧ್ಯಕ್ಷರ:** ನಾನು ತೀರ್ಮಾನ ಕೊಟ್ಟು ಆಗಿದೆ, ದಯವಿಟ್ಟು ಸಹಕರಿಸಿ.

(ಗೊಂದಲ)

**ಅಧ್ಯಕ್ಷರು:** ಪ್ಲೀಸ್, ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್. ಸುರೇಶ್ ಕುಮಾರ್:** ನಾನು ಈಗಲೂ ಕೂಡ ವಿರೋಧ ಪಕ್ಷದವರನ್ನು ಮನವಿ ಮಾಡಿಕೊಳ್ಳುತ್ತೇನೆ. ಅವರು ದಯವಿಟ್ಟು ಚರ್ಚೆ ಮಾಡಲಿ. ಅವರು ಏನು ವಿಚಾರ ತಂದಿದ್ದಾರೆ, ಅದನ್ನು ಚರ್ಚೆ ಮಾಡಲಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಚರ್ಚೆ ಮಾಡಲಿ. ಆ ವಿಚಾರದ ಬಗ್ಗೆ ಚರ್ಚೆಯನ್ನೇ ಮಾಡಬಾರದು ಎಂದು ನಾವು ಏನನ್ನೂ ಮಾಡುತ್ತಿಲ್ಲ. ಚರ್ಚೆ ಮಾಡಲಿ, ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ಆದರೆ Adjournment motion ಗೆ ಅವಕಾಶ ಕೊಡಬೇಕು ಎಂದು ಸಭಾಧ್ಯಕ್ಷರ ಮೇಲೆ ಒತ್ತಡ ತಂದು, ಅವರ ರೂಲಿಂಗ್ ವಿರುದ್ಧ ಈ ರೀತಿ ಮಾಡುವುದು ಸಭೆಗೆ ಭೂಷಣವಲ್ಲ, ಇದು ಸಭೆಗೆ ಮರ್ಯಾದೆ ತರುವುದಿಲ್ಲ.

(ಗೊಂದಲ)

(ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು).

**ಶ್ರೀ ಎಸ್. ಸುರೇಶ್‌ಕುಮಾರ್:** ಇವುಗಳನ್ನೆಲ್ಲ allow ಮಾಡುವಿರಾ? ವೆಲ್‌ನಲ್ಲಿ ಬಂದು ಭಾಷಣ ಮಾಡುವುದು, ಸ್ಟೇಟ್‌ಮೆಂಟ್ ಕೊಡುವುದಕ್ಕೆ ಅವಕಾಶವಿದೆಯೇ?

(ಗೊಂದಲ)

**ಶ್ರೀ ಟಿ.ಬಿ. ಜಯಚಂದ್ರ:** ಎಲ್ಲಾ ವಿರೋಧ ಪಕ್ಷಗಳು ಸೇರಿ ತಮಗೆ appeal ಮಾಡುತ್ತಿದ್ದೇವೆ. ದಯಮಾಡಿ ತಾವು ಪುನರ್ ಪರಿಶೀಲಿಸಬೇಕು. Adjournment Motion submissionಗೆ ತಾವು ಅವಕಾಶ ಕೊಡಬೇಕು. ಇದರಿಂದ, ಸಾರ್ವಜನಿಕವಾಗಿ ಚರ್ಚೆಯಾಗುತ್ತಿರುವಂಥ ವಿಚಾರ, ರಾಜ್ಯ ಮತ್ತು ದೇಶದಲ್ಲಿ ಆಗಿರುವಂಥ ವಿಚಾರಕ್ಕೆ ಮಹತ್ವ ಬರಬೇಕೆಂದರೆ ತಾವು ದಯಮಾಡಿ ಅವಕಾಶ ಕೊಡಬೇಕು.

(ಗೊಂದಲ)

**ಅಧ್ಯಕ್ಷರು:** ನಾನು ಮತ್ತೊಮ್ಮೆ ಎಲ್ಲರಲ್ಲಿ ವಿನಂತಿ ಮಾಡುತ್ತೇನೆ, ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಈಗ ಪ್ರಶ್ನೋತ್ತರದ ಸಮಯವೂ ಮುಗಿದು ಹೋಗಿದೆ.

**ಶ್ರೀ ಟಿ.ಬಿ. ಜಯಚಂದ್ರ:** ತಾವು ದಯವಿಟ್ಟು ಪುನರ್ ಪರಿಶೀಲನೆ ಮಾಡಿ.

**ಅಧ್ಯಕ್ಷರು:** ಈಗ ಮಾಡಬೇಕಾದವರು ನೀವು. ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ.

(ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

(ಗೊಂದಲ)

(ಈ ಹಂತದಲ್ಲಿ ಮುಖ್ಯಮಂತ್ರಿಗಳು ಮಾತನಾಡಲು ಎದ್ದು ನಿಂತರು)

(ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

**ಶ್ರೀ ಎಸ್. ಸುರೇಶ್‌ಕುಮಾರ್:** ಮುಖ್ಯಮಂತ್ರಿಗಳು ಎದ್ದು ನಿಂತಾಗಲೂ ಮಾತನಾಡುವುದು ಎಂದರೆ ಏನು ಸ್ವಾಮಿ?

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಪಂಚಾಯಿತಿ ಚುನಾವಣೆಯಲ್ಲಿ ಜನ ನಿಮಗೆ ಉತ್ತರ ಕೊಟ್ಟರಲ್ಲ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಜನ ನಿಮಗೆ ಉತ್ತರ ಕೊಡಲಿಲ್ಲವೇ? ನಿಮ್ಮ ನಡವಳಿಕೆಯ ಬಗ್ಗೆ ನಾಚಿಕೆಯಾಗಬೇಕು.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಸನ್ಮಾನ್ಯ ಅಧ್ಯಕ್ಷರೆ, ಇವರು opposition party ಯಾಗಿದ್ದುಕೊಂಡು, ರಾಜ್ಯಪಾಲರ ಭಾಷಣಕ್ಕೆ ಬಹಿಷ್ಕಾರ ಹಾಕುವಂತೆ, ಅವರ ಭಾಷಣಕ್ಕೆ ಅವಕಾಶವನ್ನೇ ಕೊಡಲಿಲ್ಲ. ಈ ರೀತಿ ಇದುವರೆಗೆ ಈ ರಾಜ್ಯದ ಇತಿಹಾಸದಲ್ಲೇ ನಡೆದಿರಲಿಲ್ಲ, ಅದನ್ನು ಇವರು ಮಾಡಿದರು. ಪ್ರತಿಪಕ್ಷದ ನಾಯಕರ ಸಭೆಗೆ ಹಾಜರಾಗಿ ಅವರ ಅಭಿಪ್ರಾಯಗಳನ್ನು ಹೇಳಲಿಲ್ಲ. ಅವರ ಉದ್ದೇಶವೇ, ಈ ಸದನ ನಡೆಯಬಾದು, ಸದನದ ಕಾರ್ಯಕಲಾಪಗಳು ನಡೆಯಬಾರದು, ನಾವು ಮಾಡಿರುವ ಒಳ್ಳೆಯ ಕೆಲಸಗಳು ಜನಗಳಿಗೆ ಗೊತ್ತಾಗಬಾರದು ಎನ್ನುವ ಒಂದು ರಾಜಕೀಯ ಷಡ್ಯಂತ್ರದಿಂದ ಇವತ್ತು ಈ ಕೆಲಸವನ್ನು ಮಾಡುತ್ತಿದ್ದಾರೆ.

(ಗೊಂದಲ)

ಯಾವುದೇ ವಿಷಯದ ಬಗ್ಗೆಯಾದರೂ ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಚರ್ಚೆ ಮಾಡೋಣ ಎಂದರೆ ಈ ರೀತಿ ದುರುದ್ದೇಶದಿಂದ ರಾಜ್ಯಪಾಲರ ಭಾಷಣವನ್ನು ಬಹಿಷ್ಕಾರ ಮಾಡಿದರು, ನೀವು ಪ್ರತಿಪಕ್ಷಗಳ ನಾಯಕರ ಸಭೆಯನ್ನು ಕರೆದರೆ ಇವರು ಅದಕ್ಕೂ attend ಮಾಡಲಿಲ್ಲ. ಅವರ ಉದ್ದೇಶವೇ ಒಳ್ಳೆಯ ರೀತಿಯಲ್ಲಿ ಚರ್ಚೆ ಯಾಗಬಾರದು, ರಾಜ್ಯದ ಜನತೆಗೆ ಸತ್ಯ ಗೊತ್ತಾಗಬಾರದು ಎನ್ನುವುದಾಗಿದ್ದು ಅದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯಲ್ಲಿ ನಿಮಗೆ ಮುಖಭಂಗವಾಗಿ ಜನ ನಿಮಗೆ ಛೀಮಾರಿ ಹಾಕಿದ್ದಾರೆ. ಇನ್ನಾದರೂ ಗೌರವದಿಂದ ವರ್ತಿಸಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

(ಗೊಂದಲ)

**ಅಧ್ಯಕ್ಷರು:** Well ನಲ್ಲಿ ಇದ್ದರೆ ಹೇಗೆ?

(ಗೊಂದಲ)

**ಅಧ್ಯಕ್ಷರು:** Please ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ನಾನು ಮತ್ತೆ ಮತ್ತೆ ತಮಗೆ ವಿನಂತಿಯನ್ನು ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಉತ್ತರ ಕೊಡುತ್ತೇವೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡಿ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ಖಂಡಿತಾ ಇದೆ. ನೀವು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡಿ. ನಾವು ಉತ್ತರ ಕೊಡುತ್ತೇವೆ.

(ಗೊಂದಲ)

**ಅಧ್ಯಕ್ಷರು:** ಸಾಕಷ್ಟು ಅವಕಾಶವಿದೆ. Please ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಸದನ ನಡೆಸಲಿಕ್ಕೆ ಅವಕಾಶ ಮಾಡಿಕೊಡಿ. ನಾನು ಮತ್ತೆ ಮತ್ತೆ ವಿನಂತಿ ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ಏಕೋ ಇವರು ನಿಮ್ಮ ಸೂಚನೆಯನ್ನು ಪಾಲಿಸುತ್ತಿಲ್ಲ. ಘೋಷಣೆ ಕೂಗಿ ಎಂದು ಏನು ಸೂಚನೆ ಕೊಡುತ್ತಿದ್ದೀರಿ, ಅದನ್ನು ಯಾರೂ ಪಾಲಿಸುತ್ತಿಲ್ಲ.

(ಗೊಂದಲ)

(ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು).

(ಗೊಂದಲ)

**ಅಧ್ಯಕ್ಷರು:** Well ನಲ್ಲಿ ಮಾತನಾಡಿದರೆ ಅದು ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ದಯವಿಟ್ಟು, ನಾನು ಮನವಿ ಮಾಡಿಕೊಳ್ಳುತ್ತೇನೆ. ಸದನದ ಬಾವಿಯಿಂದ ಸದಸ್ಯರು ತಮ್ಮ ಸ್ಥಾನಗಳಿಗೆ ವಾಪಸ್ ಬರಲಿ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡಲಿ. ಏನು ಬೇಕಾದರೂ ಆಗ ಮಾತನಾಡಲಿ, ಅದಕ್ಕೆ ಸರ್ಕಾರದಿಂದ ನಾವು ಉತ್ತರ ಕೊಡುತ್ತೇವೆ.

(ಗೊಂದಲ)

(ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

**ಅಧ್ಯಕ್ಷರು:** ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಿದರೆ ಅದು ಮಾತ್ರ ದಾಖಲೆಗೆ ಹೋಗುತ್ತದೆ. ಚರ್ಚೆ ಮಾಡೋಣ.

**(ಗೊಂದಲ)**

**ಅಧ್ಯಕ್ಷರು:** ಈಗ ಸದನವನ್ನು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12 ಗಂಟೆ 53 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 2 ನಿಮಿಷಕ್ಕೆ ಸಮಾವೇಶಗೊಂಡು ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು).

(ಸದನದ ಬಾವಿಯಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷದ ಸದಸ್ಯರು ಧರಣಿಯಲ್ಲಿ ನಿರತರಾಗಿದ್ದರು)

**ಅಧ್ಯಕ್ಷರು:** ಸದನ ನಡೆಸೋಣ. ಆದ್ದರಿಂದ, ದಯವಿಟ್ಟು ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ ಸಹಕರಿಸಬೇಕೆಂದು ಕೋರುತ್ತೇನೆ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, ನಮ್ಮ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡುವುದಿಲ್ಲವೆಂದು ತಾವೇನು ನಿರ್ಣಯ ಮಾಡಿದ್ದೀರಿ, ಅದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಅದನ್ನು reconsider ಮಾಡಬೇಕೆಂಬುದು ನನ್ನ ಮನವಿ ಆಗಿದೆ. ಈ ರೀತಿಯಾದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಹೇಳತಕ್ಕಂಥ ಹಕ್ಕನ್ನು ಮೊಟಕು ಮಾಡತಕ್ಕಂಥ ಪ್ರಯತ್ನ ಆಗುತ್ತದೆ. ಅಸೆಂಬ್ಲಿಯಲ್ಲಿ ಏನು ಬೇಕಾದರೂ ಚರ್ಚೆ ಮಾಡಲಿ ಅದಕ್ಕೆ ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆಂದು ಸರ್ಕಾರ ಒಂದು ಕಡೆ ಹೇಳುತ್ತದೆ. ಇವತ್ತಿನ ದಿವಸ ರಾಜ್ಯದಲ್ಲಿ ಇಷ್ಟೊಂದು ಭ್ರಷ್ಟಾಚಾರ ಮತ್ತು ಹಗರಣಗಳು ನಡೆಯುತ್ತಿವೆ. ಇವುಗಳನ್ನು ಚರ್ಚೆ ಮಾಡದೆ ಹೋದರೆ, ಈ ರಾಜ್ಯದ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಇವತ್ತಿನ ದಿವಸ ರಾಜ್ಯದ 6 ಕೋಟಿ ಜನ ನಮ್ಮನ್ನು ನೋಡುತ್ತಿದ್ದಾರೆ. ಇವತ್ತು ಈ ರಾಜ್ಯದಲ್ಲಿ ಸಾವಿರಾರು ಕೋಟಿ ರೂಪಾಯಿಯ ಸಂಪತ್ತು ಲೂಟಿಯಾಗುತ್ತಿದೆ. ಇದನ್ನು ನೋಡುತ್ತ ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬರಬೇಕೆ? ಜನರ ಟ್ರಸ್ಟಿಯಾಗಿ ಕೆಲಸ ಮಾಡುವುದಕ್ಕೋಸ್ಕರ ಸರ್ಕಾರಕ್ಕೆ ಜನ ವೋಟು ಕೊಟ್ಟಿದ್ದಾರೆ. ಆದರೆ, ಇವತ್ತಿನ ದಿವಸ there is a clear case of breach of trust. ರಾಜ್ಯದ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದಾರೆ. ಅಕ್ರಮ ಗಣಿಗಾರಿಕೆಯಿಂದ ಕೋಟಿಗಟ್ಟಲೆ ಹಣ ಲೂಟಿ ಹೊಡೆದಿದ್ದಾರೆಂದು ಹೇಳಿದ್ದೇವೆ. ಆದರೆ, ಈಗ ಆ

ವಿಷಯ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸಿ.ಇ.ಸಿ. ವರದಿ ಸುಪ್ರೀಂ ಕೋರ್ಟ್‌ಗೆ ಬಂದಿದೆ.

**ಅಧ್ಯಕ್ಷರು:** ಸದನ ಬಾವಿಯಲ್ಲಿ ನಿಂತುಕೊಂಡು ಮಾತನಾಡಬೇಡಿ. ತಮ್ಮ ಸ್ಥಾನಗಳಿಗೆ ಹೋಗಿ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಮುಖ್ಯಮಂತ್ರಿಯವರೆ, ಕಳೆದ 2003–04ರಿಂದ ಪರ್ಮಿಟ್ ಇಲ್ಲದೆ ಕದ್ದು 3 ಕೋಟಿ 5 ಲಕ್ಷ ಮೆಟ್ರಿಕ್ ಟನ್ iron ore ಹೋಗಿದೆ ಎಂದು ಲೋಕಾಯುಕ್ತರವರು ಹೇಳಿದ್ದಾರೆ. ಹಾಗೆಯೇ ಮಾನ್ಯ ಮುಖ್ಯಮಂತ್ರಿಯವರೂ ಸಹ ಹೇಳಿದ್ದಾರೆ. ಅವರ tenureನಲ್ಲಿ 1 ಕೋಟಿ 5 ಲಕ್ಷ ಮೆಟ್ರಿಕ್ ಟನ್ iron ore ಕದ್ದು ಹೋಗಿದೆ ಎಂದು ಹೇಳಿದ್ದಾರೆ. ಇದರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಹೇಳಿ ನೋಡೋಣ? ಈ ರೀತಿಯಾದರೆ ಸರ್ಕಾರ ಏತಕ್ಕೆ ಇರಬೇಕು? ಅಸೆಂಬ್ಲಿಗೆ ನಾವು ಬಂದು ಏನು ಮಾಡಬೇಕು? 1 ಕೋಟಿ 5 ಲಕ್ಷ ಮೆಟ್ರಿಕ್ ಟನ್ ಅದಿರು ಎಂದರೆ ಸುಮಾರು 5 ಸಾವಿರ ಕೋಟಿ ರೂಪಾಯಿ ಆಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಯಾರ ಮೇಲಾದರೂ ಕ್ರಮ ತೆಗೆದುಕೊಂಡಿದ್ದೀರಾ? ಬೇಲಿಕೇರಿ ಬಂದರಿನಲ್ಲಿ 5 ಲಕ್ಷ ಮೆಟ್ರಿಕ್ ಟನ್ ಅದಿರನ್ನು ಲೋಕಾಯುಕ್ತರು ಹಿಡಿದು ಜಪ್ತಿ ಮಾಡಿ, ಮಹಜರು ಮಾಡಿ, ಕೋರ್ಟ್‌ನಲ್ಲಿ ಎಫ್.ಐ.ಆರ್. ಹಾಕಿರುವಂಥ ಅದಿರು ಎರಡು ತಿಂಗಳಲ್ಲಿ ಮಾಯವಾಗಿದೆ. ಇದರ ಬಗ್ಗೆ ಏನಾಯಿತೆಂದು ಹೇಳಬೇಕು. (ಗೊಂದಲ) ಹೀಗೆಯೇ ಸಾವಿರಾರು ಕೋಟಿ ರೂಪಾಯಿ ಲೂಟಿಯಾಗಿದೆ. ಮತ್ತೆ ಡೀ–ನೋಟಿಫೈ ಸಂಬಂಧ ಸಾವಿರಾರು ಕೋಟಿ ರೂಪಾಯಿ ಲೂಟಿಯಾಗಿದೆ. ನ್ಯಾಯ ಈಚೆಗೆ ಬರಬೇಕಾಗಿರುವುದರಿಂದ ಇವೆಲ್ಲವನ್ನು ಸಿಬಿಐಗೆ ಕೊಡಬೇಕೆಂದು ಹೇಳಿ ನಾವು ಪಾದಯಾತ್ರೆ ಮಾಡಿದೆವು. ಮತ್ತೆ ಇಲ್ಲಿ ಐದು ದಿವಸ ಮಲಗಿದ್ದೆವು. ಆದ್ದರಿಂದ, ಸಿ.ಬಿ.ಐ.ಗೆ ಕೊಡಿ, ನ್ಯಾಯ ಹೊರಗಡೆ ಬರಲಿ. ಲೋಕಾಯುಕ್ತರಿಗೆ ಕೊಡುತ್ತೇವೆಂದು ಹೇಳಿದರು. ಲೋಕಾಯುಕ್ತರಿಗೆ ಕೊಡಿ ಎಂದು ನಾವು ಹೇಳಿದಾಗ, ಕೊಡುವುದಿಲ್ಲ, ಈಗ Judicial Commissionಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಈ ರೀತಿಯಾಗಿ ನಡೆಯುತ್ತಿರುವುದರಿಂದ ಇದರ ಬಗ್ಗೆ ಇವತ್ತಿನ ದಿವಸ ಚರ್ಚೆ ಮಾಡಲೇಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಅಧ್ಯಕ್ಷರು:** ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ.

(ಗೊಂದಲ)

**ಶ್ರೀ ಸಿದ್ದುಸವದಿ:** ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಕ್ಷದವರು ಮಾಡಿರುವ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೂ ಸಹ ಅವಕಾಶ ಕೊಡಿ.

**ಅಧ್ಯಕ್ಷರು:** ನೀವು ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಇದು ಪ್ರಜಾಪ್ರಭುತ್ವದ ಅಡಯಲ್ಲಿರುವ ಸರ್ಕಾರವಲ್ಲ. ಇದು ಸರ್ವಾಧಿಕಾರಿ ಸರ್ಕಾರವಾಗಿದೆ.

**ಅಧ್ಯಕ್ಷರು:** ಬೇರೆ ರೂಪದಲ್ಲಿ ಚರ್ಚೆ ಮಾಡಿ.

**ಶ್ರೀ ಸಿದ್ದು ಸವದಿ:** ಕಾಂಗ್ರೆಸ್ ಸರ್ಕಾರ ಮಾಡಿರುವ ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೂ ಕೂಡ ಅವಕಾಶ ಕೊಡಿ.

**ಶ್ರೀ ಸಿದ್ದರಾಮಯ್ಯ:** ದೆಹಲಿಯಲ್ಲಿ 2G Spectrum ಬಗ್ಗೆ ಸಿಬಿಐ ತನಿಖೆ ಸುಪ್ರೀಂ ಕೋರ್ಟ್‌ನ supervision ನಲ್ಲಿ ನಡೆಯುತ್ತಿದೆ.

**ಶ್ರೀ ಸಿದ್ದು ಸವದಿ:** ಸಿಬಿಐ ತನಿಖೆಯಿಂದ ಏನು ಮಾಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಸಿದ್ದರಾಮಯ್ಯ:** ಮತ್ತೆ Public Accounts Committeeಯಲ್ಲಿ ತನಿಖೆ ನಡೆಯುತ್ತಿದ್ದರೂ ಕೂಡ ಇದರ ಬಗ್ಗೆ Joint Parliamentary Committee ಆಗಬೇಕೆಂದು ಮತ್ತು ಇದಕ್ಕೋಸ್ಕರ ಮಾನ್ಯ ಪ್ರಧಾನ ಮಂತ್ರಿಯವರು ರಾಜೀನಾಮೆ ಕೊಡಬೇಕೆಂದು ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ.

**ಶ್ರೀ ಸಿದ್ದು ಸವದಿ:** ಮಾನ್ಯ ಅಧ್ಯಕ್ಷರೆ, ತಾವು ನೀಡಿರುವ ರೂಲಿಂಗ್‌ನ್ನು ಪ್ರಶ್ನೆ ಮಾಡತಕ್ಕಂಥದ್ದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿಲ್ಲವೆಂದು ಕಾಣುತ್ತದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಮಾನ್ಯ ಮನಮೋಹನ್ ಸಿಂಗ್ ಅವರ ಮೇಲೆ ಯಾವುದೇ ರೀತಿಯ ಆರೋಪ ಇಲ್ಲ. ಆದರೆ, ಇಲ್ಲಿ ಇವರ ಮೇಲೆ ನೇರವಾಗಿ ಆರೋಪ ಇದೆ.

**ಅಧ್ಯಕ್ಷರು:** ಈ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಈ ವಿಷಯವನ್ನು ನಿಲುವಳಿ ಸೂಚನೆ ಮೇಲೆಯೇ ಚರ್ಚೆ ಮಾಡಬೇಕು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾನ್ಯ

ಯಡಿಯೂರಪ್ಪನವರ ಮೇಲೆ ಆರೋಪ ಇದೆ ಮತ್ತು ಲ್ಯಾಂಡ್ ಸ್ಕ್ಯಾಮ್ ಆಗಿದೆ ಮತ್ತೆ ಸ್ವಜನಪಕ್ಷಪಾತ ಮಾಡಿದ್ದಾರೆಂದು ಮಾತನಾಡುವುದಕ್ಕೆ ಹೋದರೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ನೋಟಿಸ್ ಕೊಟ್ಟು ಚರ್ಚೆ ಮಾಡಿ ಎಂದು ಆಗ ಹೇಳುತ್ತೀರಿ. ಆದರೆ, ತಾವು ಈಗ ಈ ರೀತಿ ಹೇಳುತ್ತೀರಿ. ಈ ರೀತಿಯಾದರೆ ನಾವು ಎಲ್ಲಿಗೆ ಹೋಗಬೇಕು?

(ಗೊಂದಲ)

**ಅಧ್ಯಕ್ಷರು:** ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಅಲ್ಲಿ ಇದರ ಬಗ್ಗೆ ಚರ್ಚೆ ಮಾಡಬಹುದು.

(ಗೊಂದಲ)

**Sri Siddaramaiah:** Please, reconsider your decision. Please allow us to speak. Mr. Speaker, Please take up the adjournment motion. There are so many things.

**ಶ್ರೀ ಸಿದ್ದುಸವದಿ:** ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ರೂಲಿಂಗ್ ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಇವರ ಕಾಲದಲ್ಲಿ ಎಷ್ಟು ಹಗರಣಗಳಾಗಿವೆ ಎಂದು ಮತ್ತು ಎಷ್ಟು ಲೂಟಿಯಾಗಿದೆ ಎಂಬುದರ ಬಗ್ಗೆ ಎಲ್ಲಾ ದಾಖಲಾತಿಗಳ ಸಮೇತ ಹೇಳುತ್ತೇವೆ. ನಾವೇನು ಸುಮ್ಮನೆ ಆರೋಪ ಮಾಡುತ್ತಿಲ್ಲ.

(ಗೊಂದಲ)

**ಶ್ರೀ ಸಿದ್ದುಸವದಿ:** ನಿಮ್ಮ ಮೇಲೆ ಅವರಿಗೆ ಗೌರವ ಇಲ್ಲ. ಕಾಂಗ್ರೆಸ್ ನೀತಿ ಕಳ್ಳನ ಹಾರ..

**ಶ್ರೀ ಸಿದ್ದರಾಮಯ್ಯ:** ನಾವೇನು ಸುಮ್ಮನೆ ಆರೋಪ ಮಾಡುತ್ತಿಲ್ಲ, supported by documents.

**ಶ್ರೀ ಸಿದ್ದುಸವದಿ:** ಭ್ರಷ್ಟಾಚಾರದ ಬಗ್ಗೆ ಪಾಠ ಕಲಿಯತಕ್ಕಂಥ ಅವಶ್ಯಕತೆ ನಮಗೆ ಇಲ್ಲ.

**ಶ್ರೀ ಸಿದ್ದರಾಮಯ್ಯ:** ಇದರ ಬಗ್ಗೆ ನಾವು ಪ್ರೂಪ್ ಮಾಡದೆ ಇದ್ದಲ್ಲಿ ನಾವು ಹೊರಗಡೆ ಹೋಗುತ್ತೇವೆ.

(ಗೊಂದಲ)

**ಶ್ರೀ ಸಿದ್ದುಸವದಿ:** ಅಲ್ಲಿ ಸದನ ಸಮಿತಿ ಮಾಡುವುದಕ್ಕೆ ಆಗಿಲ್ಲ. ಅಂದರೆ, indirect ಆಗಿ ನೀವು ಒಪ್ಪಿಕೊಂಡಿದ್ದೀರಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಈ ಸರ್ಕಾರ ರಾಜೀನಾಮೆ ಕೊಡಬೇಕು. ಬೇರೆ ದಾರಿ ಇಲ್ಲ.

(ಗೊಂದಲ)

**ಶ್ರೀ ಸಿದ್ದುಸವದಿ:** 2G Spectrum ನಲ್ಲಿ ಎರಡು ಲಕ್ಷ ಕೋಟಿ ರೂಪಾಯಿ ಲೂಟಿ ಮಾಡಿದ್ದೀರಿ. ಇದರ ಬಗ್ಗೆ ಸದನ ಸಮಿತಿ ಮಾಡಲು ಕೇಂದ್ರದವರು ಮೊದಲು ಒಪ್ಪಿಕೊಳ್ಳಲಿ. ಅಲ್ಲಿ ಒಟ್ಟು ಸುಮಾರು 70 ಸಾವಿರ ಕೋಟಿ ರೂಪಾಯಿಗಳ ಹಗರಣ ಮಾಡಿದ್ದೀರಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಜಿಲ್ಲಾ ಪಂಚಾಯತ್‌ನಲ್ಲಿ ಕೇವಲ 12 ಕಡೆ ಮಾತ್ರ ಗೆದ್ದಿದ್ದಾರೆ. ಇವರು 440 ಸೀಟ್‌ಗಳನ್ನು ಗೆದ್ದಿದ್ದಾರೆ. ನಾವು 355 ಸೀಟ್‌ಗಳನ್ನು ಗೆದ್ದಿದ್ದೇವೆ. ತಾಲ್ಲೂಕು ಪಂಚಾಯತ್‌ನಲ್ಲಿ ನಾವು 1250 ಸೀಟ್‌ಗಳನ್ನು ಗೆದ್ದಿದ್ದು, ಇವರು 1500 ಸೀಟ್‌ಗಳನ್ನು ಗೆದ್ದಿದ್ದಾರೆ. ಬಹಳ ಕಡಿದು ಕಿತ್ತು ಹಾಕಿದ್ದೇವೆಂದು ಮತ್ತು sweep ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಿದ್ದಾರೆ. 30 ಜಿಲ್ಲಾ ಪಂಚಾಯತ್‌ನಲ್ಲಿ ಇವರಿಗೆ ಜನರು 12 ಕಡೆ ಮಾತ್ರ ಬಹುಮತ ಕೊಟ್ಟಿದ್ದಾರೆ. ಬಹುಮತ ಬಂದಿಲ್ಲ, ಜೆಡಿಎಸ್ ಪಕ್ಷಕ್ಕೆ 180 ಮತ್ತು ನಮಗೆ 355 ಸೀಟ್‌ಗಳು ಬಂದಿವೆ. We are more in number. The people have rejected the BJP party. They have rejected the BJP Govenrment.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ಮಾನ್ಯ ಅಧ್ಯಕ್ಷರೆ, ಇವರು ಜಿಲ್ಲಾ ಪಂಚಾಯತ್‌ನಲ್ಲಿ ನಾಲ್ಕು ಕಡೆ ಗೆದ್ದಿದ್ದಾರೆ. 12 ಕಡೆ ಬಹುಮತ ತೆಗೆದುಕೊಂಡಿರುವವರಿಗೆ you have been rejected ಎಂದು ಹೇಳುತ್ತಿದ್ದಾರೆ. ಇದಕ್ಕೆ ಏನರ್ಥ ಇದೆ?

(ಗೊಂದಲ)

**Sri Siddaramaiah:** You are rejected by the people.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ನೀವು ಎಷ್ಟೇ ಗದ್ದಲ ಮಾಡಿದ್ದರೂ ಕೂಡ...

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ನಾವು ಅಧಿಕಾರದಲ್ಲಿದ್ದಾಗ 26 ಜಿಲ್ಲೆಗಳಲ್ಲಿ ನಾವು ಗೆದ್ದಿದ್ದೆವು. ಆದರೆ, ನೀವು ಅಧಿಕಾರದಲ್ಲಿದ್ದುಕೊಂಡು ಕೇವಲ 12 ಕಡೆ ಗೆದ್ದಿದ್ದೀರಿ. ವಿರೋಧ ಪಕ್ಷದಲ್ಲಿದ್ದಾಗ ಎಷ್ಟು ಗೆದ್ದೀದ್ದೀರೆಂದು ಹೇಳಿ ನೋಡೋಣ.

(ಗೊಂದಲ)

**ಶ್ರೀ ಸುರೇಶ್‌ಕುಮಾರ್:** ನೀವು ಅಧಿಕಾರದಲ್ಲಿದ್ದಾಗ ಅಧಿಕಾರವನ್ನು ಎಷ್ಟರ ಮಟ್ಟಿಗೆ ದುರುಪಯೋಗ ಪಡಿಸಿಕೊಂಡಿದ್ದೀರಿ ಎಂದು ಅರ್ಥವಾಗುತ್ತದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ವಿರೋಧ ಪಕ್ಷದಲ್ಲಿದ್ದಾಗ ಎಷ್ಟು ಗೆದ್ದಿದ್ದೀರೆಂದು ಹೇಳಿ ನೋಡೋಣ.

(ಗೊಂದಲ)

**ಶ್ರೀ ಸುರೇಶ್‌ಕುಮಾರ್:** ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ.

**ಶ್ರೀ ಸಿದ್ದರಾಮಯ್ಯ:** ನಿಮಗೆ ನಾಚಿಕೆ ಆಗಬೇಕು.

**ಶ್ರೀ ಸುರೇಶ್‌ಕುಮಾರ್:** ದಯವಿಟ್ಟು ಅವರು ತಮ್ಮ ಸ್ಥಾನಗಳಿಗೆ ಬಂದು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಹೇಳಿ. ಆದರೆ, ಒಂದು ಸಾರಿ ರೂಲಿಂಗ್ ಕೊಟ್ಟ ಮೇಲೆ ಮತ್ತೆ ಈ ರೀತಿಯಾಗಿ ಭಾಷಣ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:** ನಿಮಗೆ ಕೇಳುವುದಕ್ಕೆ ಅಲ್ಲ. ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಸಬ್‌ಮಿಟ್ ಮಾಡುತ್ತಿದ್ದೇನೆ. I am submitting to you. I am making my submission to you. Please reconsider.

**ಅಧ್ಯಕ್ಷರು:** ಒಂದು ಸಲ ರೂಲಿಂಗ್ ಕೊಟ್ಟಾಗಿದೆ. ಮತ್ತೆ reconsider ಮಾಡುವುದಕ್ಕಾಗುವುದಿಲ್ಲ. ಬೇರೆ ರೂಪದಲ್ಲಿ ತಾವು ಚರ್ಚೆ ಮಾಡಿ.

**Sri Siddaramaiah:** Please reconsider.

**ಅಧ್ಯಕ್ಷರು:** ಬೇರೆ ರೂಪದಲ್ಲಿ ತಾವು ಚರ್ಚೆ ಮಾಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** 23 ದಿವಸ ಪಾರ್ಲಿಮೆಂಟಿನಲ್ಲಿ ಸಮಯವನ್ನು ಹಾಳು ಮಾಡಿದ್ದೀರಿ.

**ಶ್ರೀ ಎಸ್. ಸುರೇಶ್‌ಕುಮಾರ್:** ಅದಕ್ಕೋಸ್ಕರ ಇಲ್ಲಿ ಮಾಡುತ್ತಿದ್ದೀರಾ?

**ಶ್ರೀ ಸಿದ್ದರಾಮಯ್ಯ:** ನಿಮ್ಮ ಭ್ರಷ್ಟಾಚಾರವನ್ನು ಬಯಲು ಮಾಡುವುದಕ್ಕೆ, ಡಾಕ್ಯುಮೆಂಟ್ಸ್ ಇಲ್ಲಿದೆ. (ಗೊಂದಲ) ಮಾನ್ಯ ಸುರೇಶ್‌ಕುಮಾರ್‌ವರೆ, ಇಲ್ಲಿದೆ ನೋಡಿ ಡಾಕ್ಯುಮೆಂಟ್ಸ್. With all documents... They are not mere allegations. They are supported by documents. Please allow.

**ಶ್ರೀ ಸುರೇಶ್‌ಕುಮಾರ್:** ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡಿ.

**ಶ್ರೀ ಸಿದ್ದರಾಮಯ್ಯ:** ಅದು ಎಲ್ಲಾ ನಮಗೆ ಗೊತ್ತಿದೆ. ನಾನು ಅನೇಕ ಸಲ ಅದರ ಮೇಲೆ ಭಾಷಣ ಮಾಡಿದ್ದೇನೆ, ನಿಮಗೂ ಗೊತ್ತಿದೆ. Can I make charge against the Chief Minister?

**ಶ್ರೀ ಎಸ್. ಸುರೇಶ್‌ಕುಮಾರ್:** ಇದನ್ನು adjournment motion ಎನ್ನಬೇಕಾ?

**ಶ್ರೀ ಸಿದ್ದರಾಮಯ್ಯ:** ಹೌದು. Because, with documents I can make charge against any body.

**Sri S. Suresh Kumar:** It is not a specific subject.

**Sri Siddaramaiah:** I can make charge against the Chief Minister. I can make charge against the ministers with documents. Without documents, without evidence, I cannot. These are the documents I have. With all responsibility I am making charges.

**ಅಧ್ಯಕ್ಷರು:** ದಯವಿಟ್ಟು ಅದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡುತ್ತೇನೆ.

**Sri Siddaramaiah:** We are not making mere allegations. I have taken all these documents under the Right to Information Act.

(ಗೊಂದಲ)

**ಅಧ್ಯಕ್ಷರು:** ಈಗಾಗಲೇ ಒಂದು ಸಲ ತೀರ್ಪನ್ನು ಕೊಟ್ಟಾಗಿದೆ.

**ಶ್ರೀ ಸಿದ್ದರಾಮಯ್ಯ:** ದಯವಿಟ್ಟು ಅದನ್ನು reconsider ಮಾಡಬೇಕು. ಇದು ಅತ್ಯಂತ ಮಹತ್ತರವಾದಂಥ ಚರ್ಚೆ, ರಾಜ್ಯದ ಹಿತದೃಷ್ಟಿಯಿಂದ, ರಾಜ್ಯದ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೋಸ್ಕರ...

**ಅಧ್ಯಕ್ಷರು:** ಈಗಾಗಲೇ ಒಂದು ಸಲ ತೀರ್ಪನ್ನು ಕೊಟ್ಟಾಗಿದೆ. ಮತ್ತೆ reconsider ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಈ ವಿಷಯ ಚರ್ಚೆಯಾಗಲೇ ಬೇಕು ಎನ್ನುವುದು ನಮ್ಮ ಒತ್ತಾಯ. ಇದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ನಿಮ್ಮ ರೂಲಿಂಗ್‌ನ್ನು reconsider ಮಾಡಬೇಕು.

**ಅಧ್ಯಕ್ಷರು:** ಪ್ರಶ್ನೋತ್ತರಕ್ಕೆ ಅವಕಾಶವನ್ನು ಮಾಡಿಕೊಡಿ. ದಯವಿಟ್ಟು ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ. ನಿಯಮ 69ರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಇನ್ನು ನಾನಾ ಅವಕಾಶಗಳು ಇವೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಚರ್ಚೆ ಬೇರೆ ರೂಪದಲ್ಲಿ ಮಾಡೋಣ, but not on adjournment motion.

(ಗೊಂದಲ)

**ಶ್ರೀ ಸಿ.ಎಸ್. ಪುಟ್ಟೇಗೌಡ:** 6 ಕೋಟಿ ಜನ ಇದನ್ನು ನೋಡುತ್ತಿದ್ದಾರೆ. ಈ ಹುಡುಗಾಟಿಕೆ ಮಾಡುವುದು ಬೇಡ, ಇದು ಒಳ್ಳೆಯದು ಅಲ್ಲ. ಈ ರಾಜ್ಯಕ್ಕೆ ಹಿತಕಾರಿ ಅಲ್ಲ. ಇದು ನಗೆಪಾಟಿಲು ಆಗುತ್ತದೆ. ನಮ್ಮ ಜನ ಇದನ್ನು ನಿರೀಕ್ಷೆ ಮಾಡಿರಲಿಲ್ಲ.

**ಅಧ್ಯಕ್ಷರು:** ದಯವಿಟ್ಟು ಎಲ್ಲಾ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ. ಬಹಳ ಮುಖ್ಯವಾದ ಪ್ರಶ್ನೆಗಳು ಇವೆ.

(ಗೊಂದಲ)

**ಶ್ರೀ ಸಿ.ಎಸ್. ಪುಟ್ಟೇಗೌಡ:** ಪುಂಡು ಪೋಕರಿಗಳು. ಸ್ವಾಮಿ, ಹಳ್ಳಿಯ ಪಂಚಾಯಿತಿ ಎಷ್ಟೋ ವಾಸಿ. ಈ ರಾಜ್ಯದ ಜನ ಇಂತಹ ನಡವಳಿಕೆಗಳನ್ನು ನಿರೀಕ್ಷೆ ಮಾಡಿರಲಿಲ್ಲ. ಇದು ನಿಜವಾಗಲೂ ನಾಚಿಕೆಗೇಡು ಮತ್ತು ಅವಮಾನ. ಈ ಹುಡುಗಾಟಿಕೆ ಮಾಡುವುದಕ್ಕೋಸ್ಕರ, ನಾವು ಸರ್ಕಾರ ನಡೆಸುತ್ತೇವೆ ಎನ್ನುವ ವಿಚಾರ ಒಳ್ಳೆಯದು ಅಲ್ಲ.

(ಗೊಂದಲ)

**ಅಧ್ಯಕ್ಷರು:** ಅದಕ್ಕಾಗಿಯೇ ಹೇಳುತ್ತಿದ್ದೇನೆ. ಬೇರೆ ರೂಪದಲ್ಲಿ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಸಿ.ಎಸ್. ಪುಟ್ಟೇಗೌಡ:** ಖಂಡಿತವಾಗಲೂ ಇದು ಅವಮಾನ.

**ಅಧ್ಯಕ್ಷರು:** ಅದಕ್ಕೆ ನಾನು ಹೇಳುತ್ತಿದ್ದೇನೆ.

**ಶ್ರೀ ಸಿ.ಎಸ್. ಪುಟ್ಟೇಗೌಡ:** ಹೀಗಾದರೆ ವಿಧಾನಸಭೆ ಅಧಿವೇಶನ ಕರೆಯುವುದೇ ಬೇಡ.

**ಅಧ್ಯಕ್ಷರು:** ಅದನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಕೇಳುತ್ತಿದ್ದೇನೆ.

**Sri Siddaramaiah:** They are not dictators.

**ಅಧ್ಯಕ್ಷರು:** ಯಾರು dictator ಆಗುವುದು ಬೇಡ.

**ಶ್ರೀ ಸಿ.ಎಸ್. ಪುಟ್ಟೇಗೌಡ:** ಮಾನ್ಯ ಕಾರಜೋಳರವರೆ, ನೀವು ಕಂಡಿದ್ದೀರಿ, ಇದು ನಾಚಿಕೆಗೇಡು.

(ಗೊಂದಲ)

**ಅಧ್ಯಕ್ಷರು:** ಈಗಾಗಲೇ ಸರ್ಕಾರದವರು ತಮ್ಮ ನಿಲುವನ್ನು ಹೇಳಿದ್ದಾರೆ.

(ಗೊಂದಲ)

**ಅಧ್ಯಕ್ಷರು:** ಚರ್ಚೆಯಾಗಬಾರದೆಂದು ಯಾರು ಹೇಳಿರುವುದಿಲ್ಲ. ಬೇರೆ ರೂಪದಲ್ಲಿ ಚರ್ಚೆ ಮಾಡೋಣ.

**ಶ್ರೀ ಹೆಚ್.ಸಿ. ಮಹಾದೇವಪ್ಪ:** ಚುನಾವಣೆಯ ಫಲಿತಾಂಶಕ್ಕೂ ಇದಕ್ಕೂ ಸಂಬಂಧವಿಲ್ಲದಿರುವಂಥ ವಿಷಯಗಳು.

(ಗೊಂದಲ)

**ಅಧ್ಯಕ್ಷರು:** ಚರ್ಚೆಗೆ ಸರ್ಕಾರ ರೆಡಿ ಇದೆ ಎಂದು ಆಗಲೇ ಹೇಳಿದೆ. ಆದರೆ ಬೇರೆ ರೂಪದಲ್ಲಿ ಚರ್ಚೆ ಮಾಡೋಣವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಮತ್ತೆ ಮತ್ತೆ ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ತಾವು ತಮ್ಮ ಸ್ಥಾನಕ್ಕೆ ಬನ್ನಿ. ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

(ಗೊಂದಲ)

**ಶ್ರೀ ಆರ್. ಅಶೋಕ್ (ಮಾನ್ಯ ಗೃಹ ಸಚಿವರು):** ಮಾನ್ಯ ಅಧ್ಯಕ್ಷರೆ, ದಯವಿಟ್ಟು ಸರ್ಕಾರದಿಂದ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದೆ. ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ತಾವು ರೂಲಿಂಗ್‌ನ್ನು ಕೊಟ್ಟ ಮೇಲೆ ಅದನ್ನು ಅವರು ಗೌರವಿಸಿ, ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

(ಗೊಂದಲ)

**ಅಧ್ಯಕ್ಷರು:** ಚರ್ಚೆ ಮಾಡೋಣ. ಚರ್ಚೆಗೆ ರೆಡಿ ಇದ್ದಾರೆ. ತಮಗೆ ಯಾವುದೇ ತರಹದ ಭಾಷಣ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡುತ್ತೇನೆ. ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ಅವರಿಗೆ ಮಾತನಾಡುವುದಕ್ಕೆ ಅವಕಾಶ ಇರುವುದರಿಂದ ಅದರ ಅಡಿಯಲ್ಲಿ ಅವರು ಮಾತನಾಡಲಿ. ವ್ಯಾಪಕವಾದ ಚರ್ಚೆಯನ್ನು ಮಾಡಲಿ.

**ಅಧ್ಯಕ್ಷರು:** ಅವರು ಹೇಳುತ್ತಿದ್ದಾರೆ, ಎಲ್ಲಾ ತರಹದ ಚರ್ಚೆಗೆ ಅವಕಾಶವಿದೆ.

(ಗೊಂದಲ)

**ಶ್ರೀ ಎಸ್. ಸುರೇಶ್‌ಕುಮಾರ್:** ತಾವು ಈ ಕಡೆ ಇದ್ದಾಗ... ಅದು ಪ್ರೇರಣೆಯೇ? ನಮ್ಮಿಂದ ನೀವು ಪಡೆಯುತ್ತಿರುವ ಪ್ರೇರಣೆ.

(ಈ ಹಂತದಲ್ಲಿ ಶ್ರೀ ಬಂಡೆಪ್ಪ ಕಾಶೆಂಪೂರ್‌ರವರು ತಮ್ಮ ಸ್ಥಾನಕ್ಕೆ ಹೋದರು)

**ಶ್ರೀ ಬಂಡೆಪ್ಪ ಕಾಶೆಂಪೂರ್:** ಮಾನ್ಯ ಅಧ್ಯಕ್ಷರೆ, ಇವರು ವಿಧಾನಸಭೆಗೆ ಬನ್ನಿ ಮಾತನಾಡೋಣ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಏಕೆ ಸುಮ್ಮನೆ ಕುಳಿತಿದ್ದಾರೆ. ಚರ್ಚೆ ಮಾಡುವುದಕ್ಕೆ ತಯಾರಾಗಿದ್ದರೆ ಮಾತನಾಡೋಣ.

(ಗೊಂದಲ)

**ಅಧ್ಯಕ್ಷರು:** ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರೆ ಅದು ಏನು ದಾಖಲೆಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ತಮ್ಮ ಸ್ಥಾನಕ್ಕೆ ಹೋಗಿ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

(ಕೆಲವು ಸದಸ್ಯರುಗಳು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು).

(ಗೊಂದಲ)

**ಅಧ್ಯಕ್ಷರು:** ಮತ್ತೆ ರೂಲಿಂಗ್‌ನ್ನು reconsider ಮಾಡುವುದಕ್ಕೆ ಬೇರೆ ಯಾವ materials ಕಾಣುತ್ತಿಲ್ಲ. ನಾನು reconsider ಮಾಡುವುದಕ್ಕಾಗುವುದಿಲ್ಲ. ಮತ್ತೆ ವಿನಂತಿಯನ್ನು ಮಾಡುತ್ತೇನೆ. ಎಲ್ಲರೂ ತಮ್ಮ ಸ್ಥಾನಕ್ಕೆ ಹೋಗಿ. ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ, ಎಲ್ಲರೂ ಸಹಕರಿಸಿ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಬಾವಿಗೆ ಬಂದರು)

**ಅಧ್ಯಕ್ಷರು:** ನಾನು ಮತ್ತೆ ವಿನಂತಿ ಮಾಡುತ್ತೇನೆ. ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ, please, ಚರ್ಚೆಯನ್ನು ಪ್ರಾರಂಭ ಮಾಡೋಣ. ಈಗ ಅದನ್ನು ಹೇಳಿ ಆಗಿದೆ. ಮತ್ತೆ, ಮತ್ತೆ ಅದು ಬೇಡ. ಚರ್ಚೆಯನ್ನು ಮಾಡಿ ಅದಕ್ಕೆ ಬೇರೆ ample ಅವಕಾಶಗಳು ಇದೆ, please ರಾಜ್ಯಪಾಲರ ಭಾಷಣದಲ್ಲಿ ಏನು ಬೇಕಾದರೂ ಮಾತನಾಡಬಹುದು, ಅದಕ್ಕೆ ಅವಕಾಶಗಳು ಇವೆ. ಆಗ ತಾವು ಮಾತನಾಡಿ. Please...

**ಅಧ್ಯಕ್ಷರು:** Please, ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಸಾಕಷ್ಟು ಜನರ ಪ್ರಶ್ನೆಗಳು ಇವೆ. ತಾವು ಸಹಕಾರವನ್ನು ಮಾಡಿ. Please, ಅದು ಇರಲಿ, ಪ್ರಶ್ನೆಗಳು ಸಾಕಷ್ಟು ಇದೆ. Please, ...

**ಶ್ರೀ ಪಿ.ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ...

**ಅಧ್ಯಕ್ಷರು:** ಬೇರ ರೂಪದಲ್ಲಿ ಅದನ್ನು ಮಾಡಬಹುದು. ಎಲ್ಲವನ್ನೂ ಚರ್ಚೆ ಮಾಡಬಹುದು. ಚರ್ಚೆಯನ್ನು ಮಾಡುವುದಕ್ಕೆ ಅವಕಾಶವಿದೆ. Please,

(ಗೊಂದಲ)

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದನ್ನು ದಯಮಾಡಿ ಕೇಳಿ.

**ಅಧ್ಯಕ್ಷರು:** ಇಲ್ಲಿ ಎಲ್ಲರೂ ಬಾವಿಯಲ್ಲಿ ಇದ್ದಾಗ ನೀವು ಮಾತನಾಡಿದರೆ ಹೇಗೆ?

**ಶ್ರೀ ಟಿ.ಬಿ. ಜಯಚಂದ್ರ:** ಅಕ್ರಮ ಗಣಿಗಾರಿಕೆಯಂತಹ ಮಹತ್ವದ ವಿಚಾರವನ್ನು...

**ಅಧ್ಯಕ್ಷರು:** ಅದಕ್ಕೆ ತಾವು ನೋಟಿಸ್‌ನ್ನು ಕೊಡಬೇಕಾಗುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ:** ನಾವು ಕಳೆದ ಜುಲೈ ತಿಂಗಳಲ್ಲಿ ನಡೆದಂತಹ ಅಧಿವೇಶನದಲ್ಲಿ ಸಾಕಷ್ಟು ರೀತಿಯಾದಂತಹ ಮಾಹಿತಿಯನ್ನು...

**ಅಧ್ಯಕ್ಷರು:** ನೀವು ಉತ್ತರವನ್ನು ಕೊಡುವುದಕ್ಕೆ ಅವಕಾಶವನ್ನು ಕೊಡಲಿಲ್ಲ, ಅದು ಬೇರೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಲೋಕಾಯುಕ್ತರವರು ಕೊಟ್ಟಿರುವಂತಹ ವರದಿ ಕೂಡ ಇದೆ.

**ಅಧ್ಯಕ್ಷರು:** ನಾನು ಮತ್ತೆ ಮತ್ತೆ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ:** ಚರ್ಚೆ ಮಾಡಿದರೂ ಕೂಡ ಇದುವರೆಗೂ ಸರ್ಕಾರದಿಂದ ನಮಗೆ ಉತ್ತರವೂ ಬರಲಿಲ್ಲ.

**ಅಧ್ಯಕ್ಷರು:** ತಾವು ಉತ್ತರನವ್ನು ಕೊಡುವುದಕ್ಕೆ ಬಿಡಲಿಲ್ಲ. ಅದು ಈಗ ಬೇಡ.

**ಶ್ರೀ ಟಿ.ಬಿ. ಜಯಚಂದ್ರ:** ಸರ್ಕಾರದಿಂದ ನಮಗೆ ಉತ್ತರ ಬರಲಿಲ್ಲ.

**ಅಧ್ಯಕ್ಷರು:** ಈಗ ಅದು ಬೇಡ.

**ಶ್ರೀ ಟಿ.ಬಿ. ಜಯಚಂದ್ರ:** ಮೇಲ್ಮನೆಯಲ್ಲಿ ಮಾತ್ರ ಉತ್ತರವನ್ನು ಕೊಟ್ಟಿದ್ದಾರೆ, ಕೆಳಮನೆಯಲ್ಲಿ ಉತ್ತರವನ್ನು ಕೊಡಲಿಲ್ಲ.

**ಅಧ್ಯಕ್ಷರು:** ಇಲ್ಲಿ ಉತ್ತರವನ್ನು ಕೊಡುವುದಕ್ಕೆ ಬಿಡಲಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** ಆಗ ಸದನವನ್ನು ಮೊಟಕು ಮಾಡಿದರು. ನಾವು ಅನಿವಾರ್ಯವಾಗಿ ಬಳ್ಳಾರಿಗೆ ಹೋಗಬೇಕಾದಂತಹ ಪರಿಸ್ಥಿತಿ ಬಂತು.

**ಅಧ್ಯಕ್ಷರು:** ಅದು different issue.

**ಶ್ರೀ ಟಿ.ಬಿ. ಜಯಚಂದ್ರ:** ದಯಮಾಡಿ ತಾವು ಅರ್ಥ ಮಾಡಿಕೊಳ್ಳಿ.

**Mr. Speaker:** That is a different issue. ನಾನು ಹೇಳುತ್ತಿದ್ದೇನೆ, ಆ ವಿಚಾರ ಈಗ ಬೇಡ.

**ಶ್ರೀ ಟಿ.ಬಿ. ಜಯಚಂದ್ರ:** ಆ ನಿಲುವಿನಿಂದ ವಾಪಸ್ಸು ಬರುವಂತಹ ಪ್ರಶ್ನೆ ಇಲ್ಲ. ಆದರೆ ಇವತ್ತು ತಾವು... ಈಗ ಏನಾಗಿದೆ ಎಂದರೆ, 4–5 ತಿಂಗಳು ಆದ ನಂತರ ಸದನವು ಸೇರಿದೆ.

**ಅಧ್ಯಕ್ಷರು:** ಅದಕ್ಕೆ ಚರ್ಚೆ ಮಾಡೋಣ.

**ಶ್ರೀ ಟಿ.ಬಿ. ಜಯಚಂದ್ರ:** ಸದನವು ಸೇರುವಂತಹ ಸಂದರ್ಭದಲ್ಲಿ ಮೊದಲನೆಯ ದಿವಸ ಇಷ್ಟು ರಾಷ್ಟ್ರೀಯವಾಗಿ ಚರ್ಚೆಯಾಗುವಂತಹ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇವತ್ತು ನಿಲುವಳಿ ಸೂಚನೆಯ ಮುಖೇನ ಮಾತ್ರ ಸಾಧ್ಯ.

**ಅಧ್ಯಕ್ಷರು:** ತಾವು ಹೇಳಿದ್ದೀರಲ್ಲಾ, ಅದು ಬಿಡಿ.

**ಶ್ರೀ ಟಿ.ಬಿ. ಜಯಚಂದ್ರ:** ಯಾವುದೇ ಕಾರ್ಯಕಲಾಪಗಳಿಗೆ ಅವಕಾಶ ಕೊಡದ ರೀತಿಯಲ್ಲಿ ನೇರವಾಗಿ ಚರ್ಚೆಯನ್ನು ಮಾಡುವಂತಹದ್ದು ಅದು ಸಂಪ್ರದಾಯ. ಇವತ್ತು ಎಲ್ಲಾ ಕಡೆಯಲ್ಲಿ ಲೋಕಸಭೆ ಬೇರೆ ಬೇರೆ ವಿಧಾನಸಭೆಗಳಲ್ಲಿ ನಡೆದಿರುವಂತಹ ಸಂಪ್ರದಾಯ.

**ಅಧ್ಯಕ್ಷರು:** ತಾವುಗಳ ತಮ್ಮ ಸ್ಥಾನಗಳಿಗೆ ಹೋಗಿ ಎಂದು ಕೊನೆಯದಾಗಿ ಕೇಳುತ್ತಿದ್ದೇನೆ. ತಾವು ಪ್ರಶ್ನೋತ್ತರಕ್ಕೆ ಅವಕಾಶವನ್ನು ಮಾಡಿಕೊಡಿ.

**ಶ್ರೀ ಟಿ.ಬಿ. ಜಯಚಂದ್ರ:** ದಯಮಾಡಿ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನಿಮ್ಮ ತೀರ್ಮ ಏನಿದೆ, ಅದರ ನಿಯಮ 60ರಲ್ಲಿ...

**ಶ್ರೀ ಸಿದ್ದುಸವದಿ:** ಅಧ್ಯಕ್ಷರು ರೂಲಿಂಗ್ ಕೊಡುವಾಗ ಹೇಳಿದ್ದಾರೆ.

**ಅಧ್ಯಕ್ಷರು:** ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 3 ಗಂಟೆ 44 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ 11–1–2011ರಂದು ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ನಿಶ್ಚಯಿಸಿತು).